೧೫ Grievances of labourers of the Pistol Beedi Factory as Hubli

SRI A. M. HINDASGERI (Hubli).—Sir, the Management of Pistol Beedi Factory, Hubli is indulging in unfair labour practices such as reduction of work-load on the beedi workers resulting the workers to face semistarvation consequent to decrease in their wages. Though there is no necessity for such reduction in the work-load the management is doing this only with the intention of harassing the beedi workers. As a result of this the workers have resorted to Dharani satyagraha agitation against the management and the unfair labour practices.

I demand a statement by the Hon'ble Minister of Labour on the situation created by the management of Pistol Beedi Factory, Hubli.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆ ತಾನೇ ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ಲೇಬರ್ ಕಮಿಶನರ್‌ರವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಆದೇಶ ಕೊಟ್ಟಿದ್ದೇನೆ.

೧೬ ಕುಮಾರಧಾರಾ ನದಿಗೆ ಡ್ಯಾಮ್ ಕಟ್ಟುವುದರಿಂದ ಅಲ್ಲಿಯ ಜನರಿಗೆ ಉಂಟಾಗುವ ಹಾನಿ.

ಶ್ರೀ ಕೆ. ಕುಶಾಲ.—ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕಡಬ ಹೋಬಳಿಯಲ್ಲಿ ಇರುವ ಗ್ರಾಮಗಳಾದ ಕಂಟ್ರುಪ್ಪಾಡಿ, ಸೂಜಿಬಾಳ್ತಿಲ, ಕಿಂಜೆಲಾಡಿ, ಇಚ್ಲಂಪಾಡಿ, ಗ್ರಾಮಗಳಲ್ಲಿ, ನೆರಿಯಾ ಯೋಜನೆಯೂ, ಕುಮಾರಧಾರ ನದಿಗೆ ಅಡ್ಡಲಾಗಿ ಡ್ಯಾಮು ಕಟ್ಟುವ ಯೋಜನೆಯು ನಿರೀಕ್ಷಣೆ ಇದ್ದರೆ, ಇದರಿಂದ ಆ ಭಾಗದ ಜನರಿಗೆ ಪ್ರಯೋಜನವಿದೆಯೇ ? ಈ ಯೋಜನೆಯ ಮುಖ್ಯವಾದ ಉದ್ದೇಶವೇನು ? ಈ ಯೋಜನೆ ಕಾರ್ಯಗತವಾಗುವುದಾದಲ್ಲಿ ಈ ಮೇಲಿನ ಗ್ರಾಮದ ಬಹು ಭಾಗದ ರೈತರು, ಬಡ ಕೃಷಿ ಕಾರ್ಮಿಕರುಗಳಿಗಾಗುವ ತೊಂದರೆ, ಜಮೀನುಗಳನ್ನು ಕಳಕೊಳ್ಳುವ ಹಾಗೂ, ಕಷ್ಟನಷ್ಟದ ಸಂಪೂರ್ಣ ವಿವರಗಳನ್ನು ನಿಡಂವಂತೆಯೂ, ಈ ಕ್ರಮವನ್ನು ಕೈಕೊಳ್ಳಬಾರದಾಗಿಯೂ, ಸರಕಾರವನ್ನು ಒತ್ತಾಯಿಸುತ್ತೇವೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತಂದು ಸೂಕ್ತ ಉತ್ತರ ಕೊಡುವ ವ್ಯವಸ್ಥೆ ಮಾಡುತ್ತೇನೆ.

೧೭ ಮುಧೋಳ್ ತಾಲ್ಲೂಕು ಉತ್ತೂರು ಜಾಲಿಬೇರ ಯಾತ ನೀರಾವರಿ ಯೋಜನೆ

ಶ್ರೀ ಬಿ. ಜ. ಜಮಖಂಡಿ —ಸನ್ಮಾನ್ಯ ಅಧ್ಯಕ್ಷರೇ, ಮುಧೋಳ್ ತಾಲ್ಲೂಕು ಉತ್ತೂರು ಜಾಲಿಬೇರ ಯಾತ ನೀರಾವರಿ ಯೋಜನೆಯು ೧೯೭೩–೭೪ರಲ್ಲಿ ಪ್ರಾರಂಭವಾಯಿತು. ಈ ಯಾತ ನೀರಾವರಿಯ ಯೋಜನೆಯ ಮುಂಖಾಂತರ ಸುಮಾರು ೧೨೫೬ ಎಕರೆ ಜಮೀನುಗಳಿಗೆ ನೀರು ಕೊಡುವ ಕಾರ್ಯಕ್ರಮವಿತ್ತು. ಆದರೆ ಅಂದಿನಿಂದ ಇಲ್ಲಿಯವರೆಗೆ ಕೇವಲ ೫೦೦ ಎಕರೆ ಹೆಚ್ಚಿಗೆ ನೀರು ಕೊಡಲು ಆಗಿಲ್ಲ ಕಾರಣ ಕೂಡಲೇ ಹಳೆಯದಾದ ನೀರೆತ್ತುವ ಮೋಟಾರು ಪಂಪು ಮತ್ತು ಕಾಲುವೆಗಳನ್ನು ದುರಸ್ತಿ ಮಾಡದೇ ಇರುವುದು, ಇದರ ಬಗ್ಗೆ ಹಲವಾರು ಬಾರಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೂ ವಿನಂತಿಸಿದರೂ ಅದರ ಬಗ್ಗೆ ತೀವ್ರ ಕ್ರಮ ಕೈಗೊಳ್ಳಲು ಅಧಿಕಾರಿಗಳಿಂ

ಆಲಸ್ಯ ಮಾಡುತ್ತಾ ಬಂದಿದ್ದಾರೆ. ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ತಾಲ್ಲೂಕಿನಲ್ಲಿ ಪ್ರವಾಸಕ್ಕೆ ಬಂದಿದ್ದಾಗ ಗ್ರಾಮದ ರೈತರು ಉತ್ತೂರು ಜಾಲಿಗೇರ ಯಾತ ನೀರಾವರಿ ಯೋಜನೆಯಲ್ಲಿರುವ ದೋಷಗಳನ್ನು ತಿಳಿಸಿದರು. ಆಗ ಸನ್ಮಾನ್ಯ ಮಂತ್ರಿಗಳು ಅವಧಿಗೆ ಅವನ್ನು ಸರಿಪಡಿಸಲು ಆದೇಶವಿತ್ತಾಗಲೂ ಸರಿಯಾಗಿ ಮೋಟಾರ್ ಪಂಪನ್ನು ಮತ್ತು ಕಾಲುವೆಗಳನ್ನು ದುರಸ್ತಿ ಮಾಡಿಲ್ಲ.

ಈಗ ಬೇಸಿಗೆ ಕಾಲ ಪ್ರಾರಂಭವಾಗಿದೆ. ವಿದ್ಯುತ್ ಪೂರೈಕೆ ಸರಿಯಾಗಿ ಆಗುತ್ತಿಲ್ಲ. ಮೋಟಾರ್ ಪಂಪ್ ಕೆಟ್ಟು ಮೇಲೆ ನೀರು ಪೂರೈಕೆ ನಿಲುಗಡೆಯಾಗುತ್ತದೆ. ಕಾರಣ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಉತ್ತೂರು ಜಾಲಿಗೇರ ಯಾತ ನೀರಾವರಿ ಯೋಜನೆಗೆ ಹೊಸ ನೀರೆತ್ತುವ ಪಂಪ್ ಕೂಡಿಸಿ ಆ ಭಾಗದ ರೈತರ ಜಮೀನುಗಳಿಗೆ ನೀರು ಒದಗಿಸಬೇಕಾಗಿ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಇದನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ.

೧೮ ಮಿಲ್ಲು ಬಟ್ಟೆಗಳ ಪೈಪೋಟಿಯಿಂದ ನೇಕಾರರಿಗೆ ಆಗಿರತಕ್ಕ ತೊಂದರೆ

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ನೇಯ್ಗೆ ವೃತ್ತಿಯಿಂದ ಜೀವನ ಸಾಗಿಸುತ್ತಿದ್ದ ನೇಕಾರರು ಮಿಲ್ಲುಬಟ್ಟೆಗಳ ಪೈ ಪೋಟಿಯಿಂದ ಜೀವನ ಸಾಗಿಸುವುದು ದುರ್ಬಲವಾದಾಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೇಕಾರರ ಸಹಕಾರ ಸಂಘಗಳನ್ನು ಸ್ಥಾಪಿಸಿ ಅಲ್ಲಿ ತಯಾರಾದ ಬಟ್ಟೆಗಳಿಗೆ ರಿಬೇಟ್ ಕೊಡುವ ಮೂಲಕ ಅವರಿಗೆ ಸಹಾಯ ನೀಡುತ್ತಾ ಬಂದರು, ನೇಕಾರರ ಜೀವನವಂಟ್ಟು ಇದರಿಂದ ಬಹಳ ಸುಧಾರಿಸಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೮ ನೇಕಾರರ ಸಹಕಾರ ಸಂಘಗಳಲ್ಲಿ ೨೫೦೦ಕ್ಕೂ ಹೆಚ್ಚಿಗೆ ಕೈಮಗ್ಗಳು ಇದ್ದು ವರ್ಷವೊಂದಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗೂ ಹೆಚ್ಚಿನ ಬಟ್ಟೆ ತಯಾರಾಗುತ್ತಿದ್ದು ಸುಮಾರು ಒಂದು ಕಾಲು ಕೋಟಿ ರೂಪಾಯಿ ವಂಜೂರಿಯು ಮೂಲಕ ನೇಕಾರರಿಗೆ ವಿತರಣೆಯಾಗುತ್ತಿದೆ. ಸುಮಾರು ೧೫ ಸಾವಿರಕ್ಕೂ ಮೇಲ್ಪಟ್ಟು ಜನ ಈ ಸಹಕಾರಿ ಸಂಘಗಳನ್ನು ಅವಲಂಬಿಸಿಕೊಂಡಿದ್ದಾರೆ ಈ ಸುಮಾರು ೪೦ ಲಕ್ಷ ರೂಪಾಯಿಗಳಿಗೂ ಹೆಚ್ಚಿನ ಪ್ರಮಾಣದ ಬಟ್ಟೆ ದಾಸ್ತಾನಿದೆ. ಪ್ರತಿವರ್ಷವೂ ಹಬ್ಬದ ಸಲುವಾಗಿ ಶೇಕಡ ೨೦ ರಷ್ಟು ರಿಬೇಟ್ ಕೊಡುತ್ತಿದ್ದು ರಿಬೇಟಿನ ಸೌಲಭ್ಯ ಇನ್ನು ವರೆಂದೆ ಇಲ್ಲ ಎಂಬ ಸುದ್ದಿಪತ್ರಿಕೆ ಹಾಗೂ ರೇಡಿಯೋ ಮೂಲಕ ತಿಳಿದು ನೇಕಾರರ ಸಂಘದವರು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ ಈಗ ೧೮-೩-೬೭ ರಿಂದ ೨೮-೩-೬೭ ರವರೆಗೆ ಪ್ರಿಯದರ್ಶಿನಿ ಹ್ಯಾಂಡ್‌ಲೂಂ ಹೌಸ್ ಆವರಿಗೆ ಶೇಕಡ ೨೦ ರಿಬೇಟ್ ಕೊಟ್ಟಿರುವ ವಿಚಾರ ತಿಳಿದು ಬಂದಿದೆ. ಆಂತೆಯೇ ನೇಕಾರರ ಸಹಕಾರ ಸಂಘದವರಿಗೂ ರಿಬೇಟ್ ಕೊಟ್ಟು ನೇಕಾರರ ಕಷ್ಟವನ್ನು ನಿವಾರಿಸಬೇಕೆಂದು ಈ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಹೆಚ್. ಪಟೇಲ್ (ಕೈಗಾರಿಕಾ ಸಚಿವರು).—ಈ ಸೌಲಭ್ಯ ಅವರಿಗೆ ಸಿಗುತ್ತಿಲ್ಲ. ಎಂಬುದು ನನ್ನ ಗಮನಕ್ಕೆ ಬಂದಿಲ್ಲ. ಇದನ್ನು ಅವರಿಗೂ ಒದಗಿಸಿಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

೧೯ ಅಂಗನವಾಡಿ ಕಾರ್ಯಕರ್ತರ ಬೇಡಿಕೆಗಳು

ಶ್ರೀ ಎ. ಪುಷ್ಪಾವತಿ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಇರತಕ್ಕ ಅಂಗನವಾಡಿ ಕಾರ್ಯಕರ್ತರು ೮-೩-೬೭ರಂದು ಮುಖ್ಯಮಂತ್ರಿಗಳಿಗೆ ಹಾಗೂ ಸಮಾಜಕಲ್ಯಾಣ ಮಂತ್ರಿಗಳಿಗೂ ಮನವಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಇಲಾಖೆ ಅಧಿಕಾರಿಗಳ ಮೇಲೆ ಗುರುತರವಾದ ಆಪಾದನೆಗಳು ಮತ್ತು ಕೆಲವು ಬೇಡಿಕೆಗಳು ಇವೆ. ಇವರು ಮುಖ್ಯವಾಗಿ ಅಂಗನವಾಡಿ ಕಾರ್ಯಕರ್ತರನ್ನು ಶೋಷಣೆಗೆ ಒಳಪಡಿಸಿದ್ದಾರೆ ಎಂದು ದೂರು ಇದೆ. ಮತ್ತು ಅಪರ ಗೌರವಧನವನ್ನು ಏರಿಸುವ ಬಗ್ಗೆ ಇದೆ.